# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಘು ಆರ್. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **243** |
| ಉತ್ತರಿಸಬೇಕಾದ ದಿನಾಂಕ | : | 18.08.2026 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಕರ್ನಾಟಕ ಗೃಹ ಮತ್ತು ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಎಷ್ಟು ವಸತಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆ ? (ಮಾಹಿತಿ ನೀಡುವುದು)</td><td>
ಕರ್ನಾಟಕ ಗೃಹ ಮಂಡಳಿ :-<br><br>
ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಳೆದ 3 ವರ್ಷಗಳಲ್ಲಿ ಈ ಕೆಳಗಿನ ಬಡಾವಣೆಗಳಲ್ಲಿ ಮನೆಗಳನ್ನು ನಿರ್ಮಿಸಲಾಗಿರುತ್ತದೆ.<br><br>
1. ಉಡುಪಿ ಜಿಲ್ಲೆ, ಕೊರಂಗ್ರಪಾಡಿಯಲ್ಲಿ 04 ಮನೆಗಳು.<br>
2. ಗದಗ ಬೆಟಗೇರಿಯಲ್ಲಿ 120 ಫ್ಲಾಟ್‌ಗಳು.<br>
3. ಗೋಕಾಕ್ 3 ನೇ ಹಂತದಲ್ಲಿ 38 ಮನೆಗಳನ್ನು ನಿರ್ಮಾಣ ಮಾಡಲಾಗಿದೆ.<br><br>
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ :-<br><br>
2015-16 ನೇ ಸಾಲಿನಿಂದ 2018-19 ನೇ ಸಾಲಿನವರೆಗೆ ವಿವಿಧ ಹಂತಗಳಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯಡಿ ರಾಜ್ಯಾದ್ಯಂತ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಬೆಂಗಳೂರು ಜಿಲ್ಲೆ ಒಳಗೊಂಡಂತೆ ಒಟ್ಟು 1,78,600 (AHP) ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ.<br><br>
ಒಟ್ಟು ಮಂಜೂರಾದ ಮನೆಗಳ ಪೈಕಿ ಈವರೆಗೆ ಒಟ್ಟಾರೆ 1,30,943 ಮನೆಗಳನ್ನು ಪ್ರಾರಂಭಿಸಿದ್ದು, 90473 ಮನೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 40,470 ಮನೆಗಳ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. 47,657 ಮನೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. ಸದರಿ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ನಿರ್ಮಾಣ ಮಾಡಲಾದ ಮನೆಗಳ ವಿವರ ಕೆಳಕಂಡಂತಿದೆ.<br><br>
<table>
<tr><th>ಕ್ರ.ಸಂ</th><th>ವರ್ಷ</th><th>ನಿರ್ಮಾಣ ಮಾಡಲಾದ ಮನೆಗಳ ಸಂಖ್ಯೆ</th></tr>
<tr><td>1.</td><td>2023-24</td><td>23313</td></tr>
<tr><td>2.</td><td>2024-25</td><td>19219</td></tr>
<tr><td>3.</td><td>2025-26</td><td>2500</td></tr>
</table>
</td></tr>
<tr><td>ಆ)</td><td>ರಾಜ್ಯದಲ್ಲಿ ಎಷ್ಟು ಫಲಾನುಭವಿಗಳಿಗೆ ವಸತಿ ಮನೆಗಳನ್ನು ಗುರುತಿಸಿ, ಹಂಚಿಕೆ ಮಾಡಲಾಗಿದೆ ; ಇದಕ್ಕೆ ಮೂಲಭೂತ ಸವಲತ್ತುಗಳನ್ನು ಒದಗಿಸಲಾಗಿದೆಯೇ ?</td><td>
ಕರ್ನಾಟಕ ಗೃಹ ಮಂಡಳಿ :-<br><br>
ಉಡುಪಿ ಜಿಲ್ಲೆ, ಕೊರಂಗ್ರಪಾಡಿಯಲ್ಲಿ ನಿರ್ಮಿಸಿರುವ 04 ಮನೆಗಳನ್ನು ಮತ್ತು ಗದಗ ಬೆಟಗೇರಿಯಲ್ಲಿ ನಿರ್ಮಿಸಿರುವ 120 ಫ್ಲಾಟ್‌ಗಳನ್ನು ಹಾಗೂ ಗೋಕಾಕ್ 3 ನೇ ಹಂತದಲ್ಲಿ 38 ಮನೆಗಳನ್ನು ಹಂಚಿಕೆ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
</td></tr>
</table>

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ :-**

ಪೂರ್ಣಗೊಂಡಿರುವ ಮನೆಗಳ ಪೈಕಿ ಮೊದಲನೇ ಹಂತದಲ್ಲಿ ದಿನಾಂಕ:02.03.2024 ರಂದು 36,789 ಮನೆಗಳನ್ನು ಮತ್ತು 2 ನೇ ಹಂತದಲ್ಲಿ ದಿನಾಂಕ:24.01.2026 ರಂದು 42,345 ಮನೆಗಳನ್ನು ಒಟ್ಟಾರೆ 79,134 ಮನೆಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಮೃತ ಹಸ್ತದಿಂದ ಲೋಕಾರ್ಪಣೆ ಮಾಡಿ, ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. ಸದರಿ ಮನೆಗಳಿಗೆ ಸರ್ಕಾರದಿಂದ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಸದರಿ ಮಂಡಳಿಗಳ ವತಿಯಿಂದ ಇದಕ್ಕೆ ಮೀಸಲಿರಿಸಿದ ಅನುದಾನ ಹಾಗೂ ಖರ್ಚಾಗಿರುವ ಅನುದಾನವೆಷ್ಟು ? (ಮಾಹಿತಿ ನೀಡುವುದು)

**ಕರ್ನಾಟಕ ಗೃಹ ಮಂಡಳಿ :-**

ಕರ್ನಾಟಕ ಗೃಹ ಮಂಡಳಿಗೆ ಸರ್ಕಾರದಿಂದ ಯಾವುದೇ ಅನುದಾನ ನಿಗಧಿಯಾಗಿರುವುದಿಲ್ಲ. ಮಂಡಳಿಯು ತನ್ನ ಸ್ವಂತ ಸಂಪನ್ಮೂಲಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ 3 ವರ್ಷಗಳಲ್ಲಿ ವಸತಿ ಮನೆಗಳ ನಿರ್ಮಾಣಕ್ಕಾಗಿ ನಿಗಧಿ ಮಾಡಿರುವ ಮತ್ತು ಖರ್ಚು ಮಾಡಿರುವ ವೆಚ್ಚದ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ | ಸ್ಥಳ | ವಸತಿ ಮನೆಗಳ ಸಂಖ್ಯೆ | ಆಯವ್ಯಯದ ನಿಗದಿ (ರೂ.ಕೋಟಿಗಳಲ್ಲಿ) | ವೆಚ್ಚ (ರೂ.ಕೋಟಿಗಳಲ್ಲಿ) |
|---|---|---|---|---|
| 1. | ಗದಗ ಬೆಟಗೇರಿ | 120 | 34.98 | 34.98 |
| 2. | ಕೊರಂಗ್ರಪಾಡಿ, ಉಡುಪಿ | 04 | 1.24 | 1.24 |
| 3. | ಗೋಕಾಕ್ 3 ನೇ ಹಂತ, ಬೆಳಗಾವಿ | 38 | 12.50 | 12.50 |
| | ಒಟ್ಟು | 162 | 48.72 | 48.72 |

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ :-**

ವಸತಿ ಮನೆಗಳ ನಿರ್ಮಾಣಕ್ಕಾಗಿ ಮಂಡಳಿಯ ವತಿಯಿಂದ ಯಾವುದೇ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಸದರಿ ಮನೆಗಳ ನಿರ್ಮಾಣಕ್ಕಾಗಿ ಸರ್ಕಾರದಿಂದ 2023-24, 2024-25 ಮತ್ತು 2025-26 ರಲ್ಲಿ ಕ್ರಮವಾಗಿ ರೂ.250.00 ಕೋಟಿ, ರೂ.532.00 ಕೋಟಿ ಮತ್ತು ರೂ.425.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಸದರಿ ಅನುದಾನ ಸಂಪೂರ್ಣವಾಗಿ ವೆಚ್ಚ ಮಾಡಲಾಗಿದೆ ಎಂದು ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯವರು ವರದಿಸಿರುತ್ತಾರೆ.

ಸಂಖ್ಯೆ :ವಇ 199 ಕಗ್ಯಮಂ 2026

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು